SCCH – 01
MVC No.8044 OF 2024
PW1

**ಸಾಕ್ಷಿಗೆ ದಿನಾಂಕಃ 13.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ ಆರ್.ಎಂ. ರವರಿಂದಃ**

1) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು**,** ಮತ್ತು **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು ಗುರುತಿಸಿದೆ**.**
   **ಸೂಚನೆಃ** ನಿ.ಪಿ.**2** ದಾಖಲೆಯು ತೆಲುಗು ಭಾಷೆಯಲ್ಲಿದೆ**.** ಸದರಿ ದಾಖಲೆಯನ್ನು ಇಂಗ್ಲೀಷ್ ಭಾಷೆಗೆ ಭಾಷಾಂತರ ಮಾಡಿದ್ದು ಸದರಿ ಭಾಷಾಂತರ ಪ್ರತಿಯನ್ನು ನಿ.ಪಿ.**2(**ಎ**)** ಎಂದು ಗುರುತಿಸಿದೆ**.**
2) ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನಿ.ಪಿ.**3** ಎಂದು**,** ಗಾಯದ ಪ್ರಮಾಣ ಪತ್ರ ನಿ.ಪಿ.**4** ಎಂದು**,** ಅಪಘಾತದ ವರದಿಗಳನ್ನು ನಿ.ಪಿ.**5** ಮತ್ತು ನಿ.ಪಿ.**6** ಎಂದು**,** ಅಂತಿಮ ವರದಿಯನ್ನು ನಿ.ಪಿ.**7** ಎಂದು ಗುರುತಿಸಿದೆ**.**
3) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಯ ನೆರಳಚ್ಚು ಪ್ರತಿ**(photo copy)** ಅನ್ನು ಹಾಜರುಪಡಿಸಿದ್ದಾರೆ**.** ಸದರಿ ಮೂಲ ದಾಖಲೆಯನ್ನು ಮತ್ತು ನೆರಳಚ್ಚು ಪ್ರತಿ**(photo copy)** ಅನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ನೆರಳಚ್ಚು ಪ್ರತಿ **(photo copy)** ಅನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು

ಬರುತ್ತದೆ. ಆದ ಕಾರಣದಿಂದ ಸದರಿ ನೆರಳಚ್ಚು ಪ್ರತಿ**(photo copy)** ಅನ್ನು ನಿ.ಪಿ.**8** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

4) ಡಿಸ್ಚಾರ್ಜ್ ಸಮ್ಮರಿಯನ್ನು ನಿ.ಪಿ.**9** ಎಂದು ಗುರುತಿಸಿದೆ.

**ಸೂಚನೆ:** ನಿ.ಪಿ.9 ದಾಖಲೆಯು ಒಟ್ಟು **8** ಹಾಳೆಗಳನ್ನು ಒಳಗೊಂಡಿದೆ.

5) ಔಟ್ ಪೇಷಂಟ್ ರೆಕಾರ್ಡ್ ಅನ್ನು ನಿ.ಪಿ.**10** ಎಂದು ಗುರುತಿಸಿದೆ.

**ಸೂಚನೆ:** ನಿ.ಪಿ.10 ದಾಖಲೆಯು ಒಟ್ಟು **10** ಹಾಳೆಗಳನ್ನು ಒಳಗೊಂಡಿದೆ.

6) ಒಟ್ಟು **18** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.**11** ಎಂದು ಗುರುತಿಸಿದೆ.

7) ಒಟ್ಟು 9 **X-ray Film** ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**12** ಎಂದು ಗುರುತಿಸಿದೆ.

8) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿ:**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಹಾಗೂ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.